# ಎಲ್ಲಿಗೆ ಪಯಣ... ಯಾವುದೋ ದಾರಿ...




ಈ ಪ್ರಶ್ನೆಯನ್ನು ಕೇಳಿದಾಕ್ಷಣ ಹಲಬರು ಮೂಗುಮುರಿಯುತ್ತಾರೆ. ಅಪಶಕುನ .....ದೆ, ಪ್ರಾರಬ್ಧ .....ದೆ, ಎನ್ನುತ್ತಾ ಬೈಯಲಾರಂಭಿಸುತ್ತಾರೆ. ನಿಜಕ್ಕೂ ಇದು ಅಪಶಕುನವೇನು? ಹೋದ ಕೆಲಸ ಆಗುವುದಿಲ್ಲವೇನು? ಎಂಬ ಪ್ರಶ್ನೆಗಳು ಸಾಮಾನ್ಯರನ್ನು ಕಾಡುವುದು ಸಹಜ.

ಇದಕ್ಕೊಂದಿಷ್ಟು ಹಿನ್ನೆಲೆಗಳಿವೆ.

ಎಲ್ಲಿಗೆ? ಎಂದಾಕ್ಷಣ ಇಂತಲ್ಲಿಗೆ ಎಂದು ಹೇಳಲೇಬೇಕು. ಹಾಗೆ ಹೇಳಿದರೆ ಉಂಟಾಗುವ ಪರಿಸ್ಥಿತಿಗಳು ಎರಡು. ನಾನೂ ಬರುತ್ತೇನೆ ಎಂಬುದೊಂದು. ಅಲ್ಲಿಗಾ..., ಯಾಕೆ? ಎಂಬುದೊಂದು.

ನಾನೂ ಬರುತ್ತೇನೆ ಎಂದಾಗ ಒದಗಬಹುದಾದ ಪರಿಸ್ಥಿತಿಗಳು ಹೀಗಿವೆ:

1. ಇವರು ಜೊತೆ ಬರುವುದರಿಂದ ಮಾರ್ಗಾಯಾಸ ಕಳೆದು ಹುರುಪಿನಿಂದ ಸಾಗಬಹುದು. ಆದರೆ ಅಂತಹವರು ಇದ್ದು, ಅವರ ಅಗತ್ಯತೆ ಇದ್ದರೆ ಮೊದಲೇ ಅವರನ್ನೂ ಹೊರಡಿಸಿಕೊಂಡು ಹೋಗುವ ಸಾಧ್ಯತೆಗಳೇ ಹೆಚ್ಚು. ಅವರಿಗೆ ಹೇಳದೆ ಹೊರಟಿರುವುದರಿಂದ ಅವರ ಸಹವಾಸ ಪ್ರಸ್ತುತ ಪ್ರಯಾಣಕ್ಕೆ ಸೂಕ್ತವಲ್ಲವೆಂಬುದು ಅಭಿಪ್ರಾಯವಾಗುತ್ತದೆ.
2. ಪ್ರತಿ ಪ್ರಯಾಣಕ್ಕೆ ತನ್ನದೇ ಆದ ಖರ್ಚುವೆಚ್ಚದ ನಿಗದಿ ಇರುತ್ತದೆ. ಇನ್ನೊಬ್ಬರು ಸೇರಿದಾಗ ವೆಚ್ಚ ಹೆಚ್ಚಾಗುವುದು ಸಹಜ.
3. ಹೊರಟ ಸ್ಥಳ ಬರುವವರಿಗೆ ಯೋಗ್ಯವಾದದ್ದಲ್ಲದಿರಬಹುದು; ಉದಾಹರಣೆಗೆ ಮಾವನ ಮನೆಗೆ ಹೊರಟ ಅಳಿಯನಿಗೆ ಮತ್ತೊಬ್ಬ ಗಂಟು ಬಿದ್ದರೆ ಅಳಿಯನಿಗೆ ಇರುಸುಮುರುಸು, ಮಾವನ ಮನೆಗೆ ಪೀಕಲಾಟ!
4. ಯಾವುದೋ ಗೋಪ್ಯವಾದ ಕಾರಣಕ್ಕೆ ಹೋಗುತ್ತಿದ್ದರೆ, ಜೊತೆಗೆ ಬರುವವರಿಂದ ಆ ಗೋಪ್ಯತೆಗೆ ಭಂಗ ಬರಬಹುದು. ನಲ್ಲ ನಲ್ಲೆಯನ್ನು ನೋಡಲು ಹೊರಟಾಗಲೋ, ಬಹಳ ದಿವಸ ದೂರವಿದ್ದ ಗಂಡ ಹೆಂಡತಿಯನ್ನು ನೋಡಲು ಅವಳ ತವರಿಗೆ ಹೊರಟಾಗಲೋ, ಯಾರಿಂದಲೋ ಸಾಲ ಪಡೆದು ತನ್ನ ಮಾನ ಉಳಿಸಿಕೊಳ್ಳಲು ಹೊರಟಾಗಲೋ, ಯಾರನ್ನೋ ಬೈದು ಬುದ್ಧಿ ಹೇಳಲು ಹೊರಟಾಗಲೋ, ಇನ್ನೊಬ್ಬರು ಗಂಟುಬಿದ್ದರೆ ಹೋದ ಕೆಲಸ ಸಾಧಿಸಲಾಗುವುದಿಲ್ಲ.
5. ಕೆಲವೊಮ್ಮೆ ಹೊರಟಿರುವುದೇ ಎಡವಟ್ಟಿನ ಕೆಲಸದ ಮೇಲೆ, ಆಗ ಯಾರಾದರೂ ಕೇಳಿದರೆ ಸುಳ್ಳು ಹೇಳಬೇಕಾಗುತ್ತದೆ. ಆ ಸುಳ್ಳಿಗೆ ಆತುಕೊಂಡು ಇನ್ನಾರೋ ಜೊತೆಗೆ ಹೆಜ್ಜೆ ಹಾಕತೊಡಗಿದರೆ ಎಡವಟ್ಟಿನ ಕೆಲಸಕ್ಕೇ ಎಡವಟ್ಟಾಗುತ್ತದೆ!
6. ಹಳೆಯ ಕಾಲದವರು ತಮ್ಮ ಖಾಯಿಲೆಗಳನ್ನು, ಕಷ್ಟಗಳನ್ನು, ಇತರರಿಂದ ಮುಚ್ಚಿಡುತ್ತಿದ್ದರು. ಹಾಗಿದ್ದಾಗ ಅವರು ಚಿಕಿತ್ಸೆ ಪಡೆಯುವುದು, ಇನ್ನೊಬ್ಬರ ನೆರವು ಪಡೆಯುವುದು, ಮನೆಯ ವಸ್ತು, ಒಡವೆಗಳನ್ನು ಅಡ ಇಡುವುದು, ಇತ್ಯಾದಿಗಳನ್ನು ಇತರರ ಕಣ್ಣು ತಪ್ಪಿಸಿ ಮಾಡುವುದು ರೂಢಿಯಾಗಿತ್ತು. ಆಗ ಇನ್ನಾರಾದರೂ ಗಂಟು ಬೀಳುವುದು ಸರಿಯಲ್ಲವೆಂದು ಹಾಗೆಲ್ಲಾ ಎಲ್ಲಿಗೇಂತ ಕೇಳಬಾರದು ಎಂದು ತಾಕೀತು ಮಾಡುತ್ತಿದ್ದರು.
7. ಜೊತೆಗೆ ಬರುತ್ತೇನೆಂದವರು ಹೆಣ್ಣಾಗಿದ್ದರೆ ಅವರಿಗೆ ವಸತಿ, ಸೌಕರ್ಯಗಳನ್ನು ಒದಗಿಸುವುದು ಪರಸ್ಥಳಗಳಲ್ಲಿ ಕ್ಲಿಷ್ಟಕರವೇ ಆಗುತ್ತಿತ್ತು.

ಅಲ್ಲಿಗಾ..., ಯಾಕೆ? ಎನ್ನುವ ಪ್ರಶ್ನೆಯಿಂದ ಮತ್ತಷ್ಟು ತೊಂದರೆಗಳು ಉದ್ಭವಿಸುತ್ತಿದ್ದವು.

1. ಏಕೆಂದು ಹೇಳಿದಾಕ್ಷಣ ಹೋಗುವ ಸ್ಥಳದ ಬಗ್ಗೆ ಇಲ್ಲಸಲ್ಲದ ಮಾತುಗಳನ್ನು ಹೇಳುವುದರ ಮೂಲಕ ಹೋಗುವುದೇ ರದ್ದಾಗುವ ಪರಿಸ್ಥಿತಿ ಮೂಡುತ್ತಿತ್ತು.
2. ವೈಯಕ್ತಿಕ ವೈಮನಸ್ಯದಿಂದ ಹೊಮ್ಮಿದ ಮಾತುಗಳಿಂದ ಹೋಗುವವರ ಮನಸ್ಸೂ ವ್ಯಗ್ರವೂ, ಪೂರ್ವಾಗ್ರಹಪೀಡಿತವೂ ಆಗುತ್ತಿತ್ತು.
3. ಏಕೆಂದು ಹೇಳುವ ಪರಿಸ್ಥಿತಿಯಲ್ಲಿಲ್ಲದೆ, ಮಾತು ತಟಾಯಿಸಿದರೆ ಮನಸ್ತಾಪ ಉಂಟಾಗುತ್ತಿತ್ತು.

ಇಷ್ಟೇ ಅಲ್ಲದೆ, ಇಂತಹ ಸ್ಥಳಕ್ಕೆ ಎಂದು ಹೇಳಿದರೆ ಬರುವಾಗ ನನಗೆ ಇಂತಹ ಸಾಮಾನುಗಳನ್ನು ತನ್ನಿ ಎಂದೋ, ಹೋಗುವಾಗ ಇಂತಹ ಸಾಮಾನುಗಳನ್ನು ಕೊಡುತ್ತೇನೆ, ನೀವು ಹೋಗುವ ಜಾಗಕ್ಕೆ ಬಹಳ ಹತ್ತಿರದ ಈ ವಿಳಾಸಕ್ಕೆ ತಲುಪಿಡಿಬಿಡಿ ಎಂದೋ ನಮ್ಮ ಪುಟ್ಟನನ್ನೂ ಕಳಿಸ್ತೀನಿ, ಅಜ್ಜಿ ಮನೇಲಿ ಬಿಟ್ಟಿಡಿ, ಹೇಗೂ ಗಾಡೀಲಿ ಹೋಗ್ತೀರಿ, ಅವನನ್ನೇನು ಹೆಗಲ ಮೇಲೆ ಹೊರಬೇಕೇ... ಎಂದೋ ಹೆಗಲಿಗೆ ಜವಾಬ್ದಾರಿ, ಮನಸ್ಸಿಗೆ ಕಿರಿಕಿರಿ ಉಂಟಾಗುವ ಪರಿಸ್ಥಿತಿ ಉಂಟುಮಾಡುತ್ತಿದ್ದರು. ಇಂದಿಗೂ ಪರದೇಶಗಳಿಗೆ, ಪರರಾಜ್ಯಗಳಿಗೆ ಹೋಗುವ ಜನರಿಗೆ ಈ ರೀತಿಯ ಕಿರಿಕಿರಿಗಳು ತಪ್ಪಿದ್ದೇನಲ್ಲ.

ಮತ್ತೊಂದು ಅಪಾಯದ ಪರಿಸ್ಥಿತಿಯೂ ಇದ್ದೀತು. ಹೋಗುತ್ತಿರುವುದು ಇಂತಹ ಸ್ಥಳಕ್ಕೆ, ಇಂತಹ ಹಾದಿಯಲ್ಲಿ ಎಂದು ತಿಳಿದರೆ ದಾರಿಯಲ್ಲಿ ಅಡ್ಡಗಟ್ಟಿ ದರೋಡೆ ಮಾಡುವವರಿಗೂ ಸುದ್ದಿ ಹೋಗುವ ಸಾಧ್ಯತೆಗಳನ್ನು ಅಲ್ಲಗಳೆಯುವಂತಿರಲಿಲ್ಲ. ಈಗಿನಂತೆ ಅಂದೂ ಹಳ್ಳಿಗಳಲ್ಲಿ ಯಾವುದೂ ಗೋಪ್ಯವಾಗಿರುತ್ತಿರಲಿಲ್ಲವಾದ್ದರಿಂದ ಎಲ್ಲಿಗೆ ಎಂದು ಹೇಳಿ ಬೀದೀಲ್ ಹೋಗೋ ಮಾರೀನ ಮನೇಲ್ ತಂದಿಟ್ಕೊಂಡ್ಹಾಗೆ ಆಗುವ ಸಾಧ್ಯತೆಗಳು ಹೆಚ್ಚಿದ್ದವು.

ಈ ವಿಷಯಕ್ಕೆ ಮತ್ತೊಂದು ದೃಷ್ಟಿಕೋನವೂ ಉಂಟು. ಮಗಳಿಗೆ ಗಂಡು ನೋಡಲೆಂದೋ, ಹೆಂಡತಿಗೆ ಒಡವೆ ಮಾಡಿಸಲೆಂದೋ, ಅಪ್ಪನ ಜನ್ಮದಿನಕ್ಕೆ ಉಡುಗೊರೆ ತರಲೆಂದೋ ಹೊರಟಿರುವಾಗ ಎಲ್ಲಿಗೆ ಎಂದು ಹೇಳಿದರೆ ಆಯಾ ವ್ಯಕ್ತಿಗಳ ಮನದಲ್ಲಿ ಒಂದು ಆಸೆ ಗರಿಗೆದರುತ್ತದೆ. ಗಂಡು ಒಪ್ಪದೆ, ಒಡವೆ ಕೈಗೆಟುಕದೆ, ಅಥವಾ ಬೇಕಾದ ಡಿಸೈನ್ ಸಿಗದೆ, ಹಾಗೂ ಅಪ್ಪನಿಗೆ ಸೂಕ್ತ ಉಡುಗೊರೆ ದೊರಕದೆ ಬರಿಗೈಯಿಂದ ಮನೆಗೆ ಹಿಂತಿರುಗಿದರೆ ಅವರಿಗೆಲ್ಲಾ ನಿರಾಶೆ ಕಟ್ಟಿಟ್ಟ ಬುತ್ತಿ. ಆದರೆ ಹೇಳದೆಯೇ ಹೋಗಿ ಹೋದ ಕೆಲಸ ಸಾಧಿಸಿಕೊಂಡು ಬಂದನಂತರ ಘೋಷಿಸಿದರೆ ಅದರ ಗತ್ತೇ ಬೇರೆ.

ಇವೆಲ್ಲಾ ಸಂದರ್ಭಗಳಲ್ಲಿ ಎಲ್ಲಿಗೆ? ಎಂದು ಕೇಳಿದರೆ, ಅಂದಿನ ಸತ್ಯಸಂಧರಿಗೆ ಸುಳ್ಳು ಹೇಳಲು ಮುಜುಗರ, ಸತ್ಯ ಹೇಳಿದರೆ ಪೀಕಲಾಟ ಆಗುತ್ತಿದ್ದುದರಿಂದ ಎಲ್ಲಿಗೆ ಎಂದು ಕೇಳುವುದು ಅಪಶಕುನ ಎಂಬ ಹಣೆಪಟ್ಟಿ ಅಂಟಿಸುವುದು ಅನಿವಾರ್ಯವಾಯಿತು. ಅನಿವಾರ್ಯತೆ ಕ್ರಮೇಣ ಮೂಢನಂಬಿಕೆಗೆ ತಿರುಗಿತು!

■ ವೈ-ಚಾರಿ